# ಜಾನಪದ ಸಾಹಿತ್ಯದ ಮೇಲೆ ಆಧುನಿಕತೆಯ ಪ್ರಭಾವ

ಮೋಹನಕುಮಾರ್ ಡಿ.

ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ.

DOI: https://doi.org/10.5281/zenodo.17257971

## ABSTRACT:

ಭಾರತದ ಸಂಸ್ಕೃತಿಯ ಸಮೃದ್ಧಿಯನ್ನು ಪ್ರತಿಬಿಂಬಿಸುವ ಒಂದು ಪ್ರಮುಖ ಅಂಶವೆಂದರೆ ಜಾನಪದ ಸಾಹಿತ್ಯ. ಈ ಸಾಹಿತ್ಯವು ಗ್ರಾಮೀಣ ಬದುಕಿನ ನಿಜ ಸ್ವರೂಪವನ್ನು, ಜನರ ಭಾವನೆಗಳನ್ನು, ಆಚಾರ–ವಿಚಾರಗಳನ್ನು ಮತ್ತು ಜೀವನದ ಸೂಕ್ಷ್ಮತೆಯನ್ನು ತನ್ನಲ್ಲಿ ಒಳಗೊಂಡಿದೆ. ಇಂತಹ ಜಾನಪದ ಸಾಹಿತ್ಯದ ಮಹತ್ವವನ್ನು ಅರ್ಥಮಾಡಿಕೊಳ್ಳುವುದು ಇಂದು ಆಧುನಿಕ ಯುಗದಲ್ಲಿ ಅತ್ಯಂತ ಪ್ರಸ್ತುತವಾಗಿದೆ. ಜಾನಪದ ಸಾಹಿತ್ಯ ಎಂಬುದು ಜ್ಞಾನಮೂಲದಿಂದ ಹುಟ್ಟಿದದ್ದು ಅಲ್ಲ, ಅದು ಅನುಭವಗಳಿಂದ, ಜನಜೀವನದ ಸತ್ಯ ಘಟನೆಗಳಿಂದ ಮತ್ತು ಕಾಲಕ್ರಮೇಣ ಜನರು ಸಂಗ್ರಹಿಸಿಕೊಂಡ ಜ್ಞಾನದಿಂದ ರೂಪಗೊಂಡಿದ್ದು. ಇದು ಸಾಹಿತ್ಯದ ಅತೀ ಹಳೆಯ ರೂಪವಾಗಿದ್ದು, ಮೌಖಿಕವಾಗಿ ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತಾ ಬಂದಿದೆ. ಜಾನಪದವು ಹಳ್ಳಿಗೆ ಮಾತ್ರವೇ ಸೀಮಿತವಾದದ್ದು, ಅನಕ್ಷರಸ್ಥರ ಸ್ವತ್ತು, ಅರ್ಥಹೀನ ಆಚರಣೆಗಳ ಮೊತ್ತ – ಇವೆಲ್ಲಾ ಗತಿಸಿ ಹೋದ ಅಭಿಪ್ರಾಯಗಳು. ಜಾನಪದವು ಸಮಾಜದ ಉನ್ನತ ಹಾಗೂ ನಿರಂತರವಾಗಿ ಸೃಷ್ಟಿ ಆಗುವಂತದ್ದು. ಸಮಾಜದ ಬದಲಾವಣೆಯೊಂದಿಗೆ ಜಾನಪದವು ಬೆಳೆಯುತ್ತಾ ಹಾಗೂ ಬದಲಾಗುತ್ತಾ ಬರುತ್ತದೆ. ಬದಲಾಗದಿರುವಂತಹ ಯಾವುದೇ ಸಂಕೀರ್ಣತೆಯು ಜಾನಪದದಲ್ಲಿಲ್ಲ. ಒಂದು ವೇಳೆ ಅಂತಹ ಅಂಶಗಳಿದ್ದರೂ ಅವುಗಳು ಗೊತ್ತಾಗದಂತೆ ಅಳಿದು ಹೋಗಿರುವುದನ್ನು ನೋಡಬಹುದು. ಅವುಗಳು ಅಳಿದು ಹೋಗಿ ನಂತರ ಹೊಸತು ಸೃಷ್ಟಿಯಾಗುತ್ತದೆ. ಜಾನಪದವು ಎಲ್ಲಾ ಕಾಲಕ್ಕೆ ಸ್ವೀಕೃತವಾದದ್ದು, ಆಧುನಿಕತೆಯನ್ನೊಳಗೊಂಡು ಮುಂದುವರೆಯುತ್ತದೆ.

## KEYWORDS:

ಗಾದೆ, ಒಡಪುಗಳು, ಒಗಟುಗಳು, ನುಡಿಗಟ್ಟು, ಸಂಸ್ಕೃತಿ, ಲಾವಣಿಗಳು.

]=

ಜಾನಪದದ ಮೇಲೆ ಆಧುನಿಕ ಪ್ರಭಾವಗಳು, ವರ್ತನೆಗಳು ಜಾನಪದದಲ್ಲಿ ತೆರೆದ ಮನಸ್ಸಿನಿಂದ ಸ್ವೀಕೃತವಾಗುತ್ತವೆ. ಈ ದೃಷ್ಟಿಯಿಂದ ಸಾಂಸ್ಕೃತಿಕ ವಿಕಾಸವಾದಂತೆಲ್ಲ ಜಾನಪದವು ನಶಿಸುತ್ತದೆ ಎಂಬ ಆತಂಕವನ್ನು ದೂರ ತಳ್ಳಿ, ಕಾಲ ಕಾಲಕ್ಕಾಗುವ ಬದಲಾವಣೆಗಳನ್ನು ಒಪ್ಪಿಕೊಂಡು ಜಾನಪದವನ್ನು ಅಧ್ಯಯನ ಮಾಡಿದಾಗ ಜಾನಪದ ಬದುಕಿಗೆ ಹೊಸ ಅರ್ಥ, ಹೊಸ ಹುಟ್ಟು ಪ್ರಾಪ್ತವಾಗುತ್ತದೆ. ಜಾನಪದವು ಚಲನಶೀಲವಾದದ್ದು. ಆಧುನಿಕತೆಯ ಪ್ರಭಾವಗಳೇನೆ ಇದ್ದರೂ ಜಾನಪದಕ್ಕೆ ಸಾವಿಲ್ಲ, ಅದು ನಿಜವಾಗಿಯೂ ಹೊಸ ರೂಪವನ್ನು ತಳೆಯುತ್ತಾ ಬೆಳೆಯುತ್ತದೆ. ಜನ ಜೀವನದ ಎಲ್ಲಾ ಆಯಾಮಗಳನ್ನು ತನ್ನೊಳಗೆ ಗರ್ಭೀಕರಿಸಿಕೊಳ್ಳುವ ಜಾನಪದವು ವ್ಯಾಪಕವಾದದ್ದಾಗಿದೆ. ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ತನ್ನದೇ ಆದ ರೂಪಗಳನ್ನು ಬದಲಾಯಿಸಿಕೊಂಡು ವೈಜ್ಞಾನಿಕ ಪ್ರಗತಿ, ಆಧುನಿಕ ಶಿಕ್ಷಣಗಳ ಪರಿಣಾಮದಿಂದ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಜೀವನ ಮೌಲ್ಯಗಳು ತ್ವರಿತಗತಿಯಲ್ಲಿ ಬದಲಾಗುತ್ತವೆ. ಈ ಸ್ಥಿತ್ಯಂತರ ಸಂದರ್ಭದಲ್ಲಿ ಜಾನಪದದ ಹಳೆಯ ರೂಪಗಳು ಕಡಿಮೆಯಾಗುತ್ತವೆ. ಜಾನಪದಗಳನ್ನು ಗಮನಿಸಿದರೆ ಗಾದೆ, ಒಡಪುಗಳು, ಒಗಟುಗಳು, ನುಡಿಗಟ್ಟು, ಸಂಸ್ಕೃತಿ, ಲಾವಣಿಗಳು, ಕಥನಗೀತೆಗಳು ಇತ್ಯಾದಿಗಳನ್ನು ಜಾನಪದ ಸಾಹಿತ್ಯವು ಒಳಗೊಂಡಿರುತ್ತದೆ. ಜಾನಪದ ಸಾಹಿತ್ಯವು ಕಾಲಾನುಕ್ರಮವಾಗಿ ಆಧುನಿಕ ಸಂದರ್ಭದಲ್ಲಿ ಜಾನಪದದ ಉಳಿವು ಮತ್ತು ಅಳಿವಿನ ಪ್ರಶ್ನೆಯಾಗಿದೆ. ಆಧುನಿಕ ಪ್ರಗತಿ ಮತ್ತು ಕೈಗಾರಿಕೆಗಳ ಪ್ರಭಾವ, ತ್ವರಿತ ನಗರೀಕರಣ ಇತ್ಯಾದಿಗಳಿಂದಾಗಿ ಜಾನಪದವು ಬಹುಬೇಗನೆ ಅಳಿಸಿ ಹೋಗುತ್ತದೆ ಎನ್ನುವ ಒಂದು ಮನೋಭಾವನೆ ಉಳಿಯುತ್ತದೆ. ಜಾನಪದವು ಒಂದು ದೊಡ್ಡ ಕೊಡುಗೆಯಾಗಿದೆ. ಆಧುನಿಕ ಕಾಲದಲ್ಲಿ ಉಳಿವು-ಅಳಿವಿನ ಪ್ರಶ್ನೆಯಾಗಿದೆ ಏಕೆಂದರೆ ಜಾನಪದ ಕೆಲವು ಕಲೆಗಳು, ಸಂಸ್ಕೃತಿಯನ್ನು ಈ ಆಧುನಿಕ ಕಾಲದಲ್ಲಿ ತುಂಬಾ ಬದಲಾವಣೆಯನ್ನು ಕಾಣಬಹುದಾಗಿದೆ. ಜಾನಪದದಿಂದ ಹಲವು ಜನರು ಜೀವನವನ್ನು ರೂಪಿಸಿಕೊಳ್ಳುತ್ತಿದ್ದರು ಹಾಗೂ ಅವರ ಒಂದು ಜೀವನ ದಿನಚರಿಯಾಗಿತ್ತು. ಜಾನಪದದಿಂದ ಕೆಲವು ಸತ್ಯಾಂಶಗಳನ್ನು ಕೂಡ ಕಾಣಬಹುದಾಗಿತ್ತು. ಜಾನಪದ ಕಲೆಯಿಂದ ಯಾವುದೇ ಹಾನಿಕಾರವನ್ನುಂಟು ಮಾಡುತ್ತಿರಲಿಲ್ಲ. ಜಾನಪದಕ್ಕೆ ಇರುವ ಬೆಲೆ ಯಾವುದೇ ಒಂದು ವಿಷಯಕ್ಕೆ ಇಲ್ಲ ಎಂದು ಹೇಳಬಹುದು. ಜಾನಪದವು ತನ್ನದೇ ಆದ ಸಂಸ್ಕೃತಿ, ಉದ್ದೇಶವನ್ನು ಹೊಂದಿದೆ. ಮನುಕುಲದ ಬೆಳವಣಿಗೆಯ ಚರಿತ್ರೆಯಲ್ಲಿ ಆಹಾರ ಸಂಗ್ರಹಣೆ, ಬೇಟೆ, ಪಶುಪಾಲನೆ, ಕೃಷಿ, ಕೈಗಾರಿಕೆ ಹೀಗೆ ನಾನಾ ಘಟಕಗಳನ್ನು ಆಯ್ದು ಬಂದಿರುವ ಮನುಷ್ಯ ಇಂದು ಆಧುನಿಕ ಯುಗದಲ್ಲಿದ್ದಾನೆ. ವಿಜ್ಞಾನದ ನೂತನ ಆವಿಷ್ಕರಣಗಳು, ಸಾಮಾಜಿಕ ವ್ಯವಸ್ಥೆಯ ಸಮಗ್ರ ಬದಲಾವಣೆ, ಆರ್ಥಿಕತೆಯೇ ಪ್ರಧಾನವಾಗಿರುವ ಇಂದಿನ ದಿನಗಳಲ್ಲಿ ಸಂಸ್ಕೃತಿ ಮತ್ತು

ಬದುಕುಗಳೆರಡೂ ಸಂಕೀರ್ಣತೆಗೆ ಒಳಗಾಗಿವೆ. ಇಂಥ ಸಂದರ್ಭದಲ್ಲಿ ಆಧುನಿಕ ಪ್ರಗತಿಯಲ್ಲಿ ಜಾನಪದ ಎಂದಿಗೂ ತನ್ನ ಸ್ವರೂಪ ಮತ್ತು ಅಸ್ತಿತ್ವವನ್ನು ಕಳೆದುಕೊಳ್ಳುವುದಿಲ್ಲ. ಅದರ ಸಾಮರ್ಥ್ಯವೇ ಅಂತಹದ್ದು. ಜಾನಪದವು ಆಧುನಿಕತೆಗೆ ಬದಲಾಗಲು ಕಾರಣವೇನೆಂದರೆ ನಗರೀಕರಣದ ಫಲವಾಗಿ ಹಳ್ಳಿಗಳಿಂದ ಪಟ್ಟಣಗಳತ್ತ ಜನರು ನಿರಂತರವಾದ ಏಕಮುಖ ವಲಸೆ ಹೆಚ್ಚಾಯಿತು. ಜಮೀನುಗಳನ್ನು ಮಾರಿಕೊಂಡು ಕೃಷಿ ಕಸುಬಿನಿಂದ ವಂಚಿತರಾದ ಹಳ್ಳಿಗರು ದುಡಿಮೆಯನ್ನು ಹರಸಿಕೊಂಡು ಮೂಲ ನೆಲೆಗಳನ್ನು ಬಿಟ್ಟು ನಗರಗಳತ್ತ ಧಾವಿಸಿದರು. ಅದಕ್ಕೆ ಜಾನಪದವು ಆಧುನಿಕತೆಗೆ ಬದಲಾವಣೆಯಾಗುತ್ತದೆ ಹಾಗೂ ಆಧುನಿಕತೆಗೆ ಇನ್ನೂ ಬದಲಾವಣೆಗಾಗಿ ಕೆಲವು ರೂಪಗಳಲ್ಲಿ ನೋಡಬಹುದು. ಅವುಗಳೆಂದರೆ ಸರಕು ಸಾಂಸ್ಕೃತಿಕ ಸಾಮಗ್ರಿಗಳ ಬಳಕೆಯಲ್ಲಿ ಆಗಿರುವ ಸ್ಥಿತ್ಯಂತರವಷ್ಟೇ. ಉಪಭೋಗ ಹೊರತು ವ್ಯಕ್ತಿಯ ಆಂತರ್ಯದಲ್ಲಿ ಹೆಚ್ಚಿನ ಬದಲಾವಣೆಗಳಾಗಿಲ್ಲ. "ಇವತ್ತಿನ ಅಣು ವಿಜ್ಞಾನಿಯೂ ಕೂಡ ಪರಂಪರಾಗತ ಸಂಸ್ಕೃತಿ, ಸಾಂಪ್ರದಾಯಿಕ ನಂಬಿಕೆಗಳ ತೆಕ್ಕೆಯಲ್ಲಿಯೇ ಇದ್ದಾನೆ. ಸೂರ್ಯಗ್ರಹಣವು ಇಂದಿಗೂ ಹಲವು ವಿಧಿ ನಿಷೇಧ ಆಚರಣೆಗಳ ಮೊತ್ತವಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಪ್ರತಿ ಶುಕ್ರವಾರ ತಪ್ಪದೆ ಲಕ್ಷ್ಮೀ ಪೂಜೆ ನಡೆಯುತ್ತದೆ. ಅತ್ಯಾಧುನಿಕ ಕಾರ್ಖಾನೆಗಳಲ್ಲಿ ವರ್ಷಕ್ಕೊಮ್ಮೆ ಆಯುಧಪೂಜೆ ನಡೆಯುತ್ತದೆ".[1] ಇದು ಆಧುನಿಕತೆಗೆ ಬದಲಾವಣೆಯಾಗಿದ್ದರು ಜಾನಪದವನ್ನು ಸಂಪ್ರದಾಯಿಕವಾಗಿ ಕೆಲವು ವಿಷಯದಲ್ಲಿ ಮುಂದುವರಿಸಿಕೊಂಡು ಬಂದಿದ್ದಾರೆ. ಇಂದು ಜಾನಪದವು ಆಧುನಿಕತೆಗೆ ಹೊಂದಿರಬಹುದು ಆದರೆ ಮೂಲ ಜಾನಪದವನ್ನು ಮರೆತಿಲ್ಲ ಎಂದು ಹೇಳಬಹುದು. ಜಾನಪದವು ಅಪ್ಪಟ ಕ್ರಿಯಾಶೀಲವಾದದ್ದಾಗಿದ್ದು, ಸಂಕಲನ ವ್ಯವಕಲನಗಳೊಂದಿಗೆ ಉದ್ದಕ್ಕೂ ಉಳಿದುಕೊಂಡು ಬಂದಿದೆ. ಕ್ರಿಯಾತ್ಮಕ ಚಟುವಟಿಕೆಗಳನ್ನು ಅನುಸರಿಸಿ ಹುಟ್ಟುತ್ತದೆ. "ಹಿ. ಶಿ. ರಾಮಚಂದ್ರಗೌಡರು ಹೇಳುವಂತೆ ಒಂದು ಒಪ್ಪಿತ ಪರಂಪರಾಗತ ಧೋರಣೆಯ ಮೇಲೆ ಬದುಕುತ್ತಿದ್ದು ತನ್ನೆಲ್ಲಾ ಜಾನಪದ ಕಲೆ, ವೈದ್ಯ, ನಡೆ, ನುಡಿ, ಬದುಕು ಮುಂತಾದ ಮಾದರಿಗಳಿಂದ ಪುನರ್ ರೂಪಗೊಳಿಸಿಕೊಂಡು ಹೋಗುದನ್ನೇ ನಾವು ಜಾನಪದದಲ್ಲಿಯ ಕ್ರಿಯಾಶೀಲತೆ ಎಂದು ಕರೆಯಬಹುದು."[2] ಜಾನಪದ ಎಂದರೆ ಸಂದರ್ಶನ, ಪುಳಕಿತಗೊಳ್ಳುವ ಭಾವುಕ ಪ್ರವೃತ್ತಿ ಮತ್ತು ಜಾನಪದ ನಶಿಸುತ್ತದೆ ಎನ್ನುವ ಅವೈಚಾರಿಕ ಕೊರಗುಗಳನ್ನು ಬದಿಗೊತ್ತಿ ಜಾಗತಿಕ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಜಾನಪದದ ವ್ಯಾಪ್ತಿಯನ್ನು ಗುರುತಿಸಿಕೊಳ್ಳಬೇಕಾದದ್ದು ನಮ್ಮ ಮುಂದಿರುವ ಜವಾಬ್ದಾರಿಯಾಗಬೇಕು. ಈ ಹಿನ್ನಲೆಯಲ್ಲಿ ಆಧುನಿಕ ಜಾನಪದದ ನೆಲೆಗಳನ್ನು ಅರ್ಥೈಸಿಕೊಳ್ಳುವಾಗ ಎರಡು ಅಂಶಗಳನ್ನು ನಾವು ನೋಡುವುದಾದರೆ ಅವು ಈ ಕೆಳಗಿನಂತಿದೆ.

» ಮೌಖಿಕ ರೂಪದಲ್ಲಿರುವುದು ಮಾತ್ರವೇ ಜಾನಪದ ಎಂಬ ಪರಿಕಲ್ಪನೆಯನ್ನು ಬದಲಾಯಿಸಿಕೊಳ್ಳತಕ್ಕದ್ದು.

» ನಗರದಲ್ಲಿ ವಾಸಿಸುವ ಜನ ಸಮುದಾಯವು ಜಾನಪದ ಸಮುದಾಯವಲ್ಲ ಎಂಬ ತಿಳುವಳಿಕೆಯನ್ನು ಮಾರ್ಪಡಿಸಿಕೊಳ್ಳಬೇಕಾದದ್ದು.

ನಗರೀಕರಣವು ಆಧುನಿಕತೆಯ ಅನಿವಾರ್ಯದ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯಲ್ಲಿ ಅಕ್ಷರ ಬರವಣಿಗೆ ಸಂವಹನದ ಬಹುಮುಖ್ಯ ಶಕ್ತಿಯಾಗಿದೆ. ಆದರೆ ಈ ಅಕ್ಷರ ಬರವಣಿಗೆ ಪ್ರಮುಖವಾಗಿ ಸಂವಹನ ಪ್ರಕ್ರಿಯೆಯಲ್ಲಿ ಕ್ರಮೇಣವಾಗಿ ನೋಡಬಹುದು. ಮೊದಲಿಗೆ ಕೆಲವು ಸ್ವಾತಂತ್ರ್ಯ ಹೋರಾಟಗಾರರು ಮೊದಲಿಗೆ ಹಾಡುಗಳನ್ನು ಹಾಡುವ ಸಂದರ್ಭದಲ್ಲಿ ತಮ್ಮ ಹೋರಾಟದ ಎಲ್ಲಾ ಅಂಶವನ್ನು ಲಾವಣಿ ರೂಪದಲ್ಲಿ ವ್ಯಕ್ತಪಡಿಸಿದರು. ಆ ನಂತರ ಲಾವಣಿಗಳು ಬರವಣಿಗೆ ಮೂಲಕವಾಗಿ ಸ್ವರೂಪವಾಗಿ ಪಡೆದವು. ಆಧುನಿಕ ಕಾಲದಲ್ಲಿ ಜಾನಪದವು ಬದಲಾವಣೆಯನ್ನು ಹೊಂದಿದೆ, ಅಂದರೆ ಜಾನಪದದಲ್ಲಿ ಕೆಲವು ಸಂಸ್ಕೃತಿಗಳಾದ ಹಬ್ಬ, ಹರಿದಿನಗಳ ಸಮಯದಲ್ಲಿ ಜಾನಪದ ಲಾವಣಿಗಳು ಮತ್ತು ಗಾದೆಗಳು, ಕಥೆಗಳು, ಒಗಟುಗಳನ್ನು ಹೇಳುತ್ತಿದ್ದರು. ಆಧುನಿಕತೆಯಲ್ಲಿ ಜನರಿಂದ ಜಾನಪದದ ಎಲ್ಲಾ ಪ್ರಕಾರಗಳು ಕಂಡು ಬರುವುದಿಲ್ಲ. ಕಾರಣ ಪ್ರಸ್ತುತವಾಗಿ ಎಲ್ಲಾ ತಂತ್ರಾಂಶಗಳನ್ನು ಬಳಸಿಕೊಳ್ಳುತ್ತಿರುವ ಪರಿಣಾಮವಾಗಿ ಜಾನಪದವು ಇಂದು ಒಂದು ರೀತಿಯಲ್ಲಿ ಗೌಣವಾಗಿ ಕಾಣುತ್ತಿದೆ. ಆಧುನಿಕ ಬದುಕಿನಲ್ಲಿ ಸೌಕರ್ಯಗಳು ಮನುಷ್ಯನನ್ನು ನಾಗರಿಕನನ್ನಾಗಿ ಮಾಡಲು ಸಹಾಯಕವಾಗಿರುವುದು. ಆಧುನಿಕತೆಯಲ್ಲಿ ತಂತ್ರಾಂಶವಿದ್ದರೂ ಜಾನಪದವು ಇದ್ದೇ ಇರುತ್ತದೆ. ಜಾನಪದ ಎನ್ನುವುದು ಹಿಂದುಳಿದ, ಅನಕ್ಷರಸ್ಥ, ಗ್ರಾಮೀಣ ಸಮಾಜದಲ್ಲಿ ಮಾತ್ರವೇ ಇರಬೇಕೆಂಬ ಕಟ್ಟುಪಾಡೇನಿಲ್ಲ.

ನಾಗರಿಕತೆ ಬೆಳೆದಂತೆ ಬದಲಾದ ಸಂದರ್ಭದಲ್ಲಿ ಜಾನಪದವು ಬೆಳೆಯುತ್ತಾ ಹೋಗುತ್ತದೆ. ನಗರಗಳಲ್ಲಿ ಬದುಕುವವರು ಪರಂಪರಾಗತ ನಂಬಿಕೆ, ನಡುವಳಿಕೆ, ರೀತಿ–ನೀತಿ, ಆಚಾರ–ವಿಚಾರಗಳನ್ನು ಅನುಸರಿಸಿಕೊಂಡು ಬಂದವರೇ ಆಗಿರುತ್ತಾರೆ. ಈ ದೃಷ್ಟಿಯಿಂದ "ಜಾನಪದದ ಏಕ ಮಾತ್ರ ಗ್ರಾಹ್ಯ ತತ್ವ ಏನು ಎನ್ನುವುದನ್ನು ನಮ್ಮ ವಿದ್ವಾಂಸರು ತಲುಪದಿರುವುದು ನಮ್ಮೆಲ್ಲರ ಪರಿಮಿತಿ ಎಂಬುವುದನ್ನು ನಾವು ಗಾಢವಾಗಿ ಚಿಂತಿಸಬೇಕು. ಈ ಕೊರತೆಯಿಂದ ನಗರ ಜಾನಪದ, ಆಧುನಿಕ ಜಾನಪದ, ಆದಿವಾಸಿ ಜಾನಪದ, ಧಾರ್ಮಿಕ ಜಾನಪದ, ರೈತಾಪಿ ಜಾನಪದ ಎಂಬ ಇತ್ಯಾದಿ ಪದಗಳು ಬಳಕೆಯಾಗುತ್ತವೆ. ಇದು ಜಾನಪದವನ್ನು ಹುಡುಕುವ ತೀರಾ ಪ್ರಥಮ ಪ್ರಯತ್ನವೇ ಹೊರತು ಜಾನಪದವನ್ನು ಗುರುತಿಸಿಕೊಂಡು ನಿಶ್ಚಿತ ಕ್ರಮವಲ್ಲ"[3].

ಜಾನಪದದಲ್ಲಿ ನಮಗೆ ಗೊತ್ತಿರುವಂತ ಹಾಡು, ಕಥೆ, ಒಗಟು, ಗಾದೆ ಮುಂತಾದವು ಸಿದ್ಧ ಪ್ರಕಾರಗಳ ರೂಪದಲ್ಲಿ ಜಾನಪದ ಸಿಗುವುದಲ್ಲ, ಆದರೆ ಆಧುನಿಕತೆಯು ಈ ಜಾನಪದದ ಮೇಲೆ ಯಾವ ರೀತಿ ಪರಿಣಾಮ ಬೀರಿದೆ ಎಂದರೆ, ರೇಡಿಯೋ, ಟಿವಿ, ಮೊಬೈಲ್, ಕಂಪ್ಯೂಟರ್ ಮುಂತಾದ ಆಧುನಿಕ ವಿದ್ಯುನ್ಮಾನಗಳಲ್ಲಿ ಸಾಂಸ್ಕೃತಿಕ ವೈವಿಧ್ಯವು ಆವಿಷ್ಕಾರ ಪಡೆಯುವುದನ್ನು ಇಲ್ಲಿ ಗಮನಿಸಬಹುದು. ಇದರಿಂದ ಜಾನಪದಕ್ಕೆ ಆಧುನಿಕತೆಯ ಪರಿಣಾಮವು ತುಂಬಾ ಪ್ರಭಾವ ಬೀರಿರುವುದನ್ನು ಕಾಣಬಹುದು. ಜಾನಪದ ಮತ್ತು ಆಧುನಿಕತೆಯಲ್ಲಿ ಅಧ್ಯಯನ ಮಾಡುವಾಗ ಕೆಲವು ಕ್ಷೇತ್ರದಲ್ಲಿ ಹೇಗೆ ಬದಲಾವಣೆಯಾಗಿದೆ ಎಂದು ನೋಡಬಹುದಾದರೆ:

**1. ಕೈಗಾರಿಕಾ ಜಾನಪದ**

**2. ವಾಹನ ಜಾನಪದ**

**3. ಕಾಲೇಜು ಜಾನಪದ ಇತ್ಯಾದಿಗಳು**

ಮೊದಲಿಗೆ ಕೈಗಾರಿಕಾ ಜಾನಪದವು ಹೇಗೆ ಬದಲಾವಣೆಯಾಗಿದೆ ಎಂದರೆ, ಜಾನಪದವು ಕೈಗಾರಿಕಾ ಕ್ಷೇತ್ರದಲ್ಲಿ ಕಾರ್ಮಿಕರು ಹೇಳುವ ಹಾಡುಗಳಿವೆ. ಕುಂಬಾರ, ಅಕ್ಕಸಾಲಿಗ ವೃತ್ತಿ ಮುಂತಾದ ವೃತ್ತಿ ಹಾಗೂ ಕುಲಗಳ ಹುಟ್ಟನ್ನು ಹೇಳುವಂತಹ ಕಥೆಗಳಿವೆ. ಈ ವೃತ್ತಿಗೆ ಸಂಬಂಧಿಸಿದ ಗಾದೆಗಳು ಹೇರಳವಾಗಿ ಪ್ರತಿಯೊಂದು ವೃತ್ತಿಗೂ ವಿಶಿಷ್ಟವಾದ ಕೆಲವು ಧಾರ್ಮಿಕ ಸಂಪ್ರದಾಯಗಳು, ಆಚರಣೆಗಳು, ನಂಬಿಕೆಗಳು, ಆದಿದೈವಗಳು ಇವೆ. ಆದರೆ ಆಧುನಿಕತೆಯಲ್ಲಿ ಆಧುನಿಕ ಯಂತ್ರ, ತಂತ್ರಜ್ಞಾನ. ಈ ಆಧುನಿಕ ಕೈಗಾರಿಕಾ ಸಂಸ್ಕೃತಿಯೇ ವಿಭಿನ್ನವಾದದ್ದು. ಇಲ್ಲಿರುವುದು ಹಳೆಯ ಜನರ ಸಮುದಾಯವನ್ನು ನಾಶ ಮಾಡಿ ಅದರ ಬದಲಿಗೆ ಪರಂಪರೆ ಇಲ್ಲದ ಯಂತ್ರಗಳಿಗೆ ಬಂಧಿತವಾದ ಮುಖಹೀನ ಕಾರ್ಮಿಕ ಸಂಸ್ಕೃತಿಯನ್ನು ಹುಟ್ಟು ಹಾಕಿರುವಂತಹ ಕೈಗಾರಿಕೆಗಳು. ಈ ಕೈಗಾರಿಕೆಗಳಲ್ಲಿ ಯಂತ್ರಗಳೇ ಪ್ರಧಾನ. ಈ ನೆಲೆಯಲ್ಲಿ ಮಾಡುವ ಅಭಿವೃದ್ಧಿಗಳು ಪ್ರಜ್ಞಾ ಪೂರ್ವಕವಾದ ಅಭಿವ್ಯಕ್ತಿಗಳಾಗಿರುವುದಿಲ್ಲ. ಹಾಡು, ಕಥೆ, ಒಗಟುಗಳು ನಿರೂಪಣೆಗೆ ಇದ್ದಂತೆ ಇಲ್ಲಿನ ವ್ಯಕ್ತಿಗಳಿಗೆ ಒಂದು ನಿರ್ದಿಷ್ಟ ಪ್ರತ್ಯೇಕ ಸಮಯ ಅಥವಾ ಬಿಡುವು ಇರುವುದಿಲ್ಲ. ಜಾನಪದ ಸಾಹಿತ್ಯವನ್ನು ಹೋಲಿಸಿದರೆ ಆಧುನಿಕ ಸಾಹಿತ್ಯವು ತುಂಬಾ ಬದಲಾವಣೆಯಾಗಿದೆ. ಜಾನಪದ ಸಾಹಿತ್ಯವು ಜನರಲ್ಲಿ ಖುಷಿ, ಸಂಬಂಧಗಳು, ಒಂದು ಉತ್ತಮ ಸಂಬಂಧವನ್ನು ಬೆಳೆಸುತ್ತದೆ. ಜಾನಪದ ಸಾಹಿತ್ಯದಿಂದ ಹಲವು ಸಂಬಂಧಗಳು ಬೆಳೆದಿರುವುದನ್ನು ನೋಡಬಹುದು. ಆಧುನಿಕತೆಯಲ್ಲಿ ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ಇಬ್ಬರ ನಡುವೆ ಯಾವುದೇ ಸಂಭಾಷಣೆ ಇರುವುದಿಲ್ಲವೆಂದು ಕಾಣಬಹುದು.

ಕೈಗಾರಿಕಾ ಜಾನಪದದಲ್ಲಿ ಕಥೆಗಳಂತೆ ಸಂಗ್ರಹಿಸಬಹುದಾದ ಇನ್ನೊಂದು

ಪ್ರಕಾರವೆಂದರೆ ಕೈಗಾರಿಕಾ ಭಾಷೆ. ಇದು ಪದ ಚಮತ್ಕಾರ, ಅಡ್ಡ ಹೆಸರು, ಬೈಗುಳ, ಅನುಕರಣ ಶಬ್ದ, ಘೋಷಣೆಗಳು, ನೀತಿವಾಕ್ಯ ಮುಂತಾದವನ್ನು ಒಳಗೊಳ್ಳುತ್ತದೆ. ಇವು ಕೂಡ ಇಲ್ಲಿಯ ಕಾರ್ಯ ಪರಿಸರದ ಹಿನ್ನೆಲೆಯಲ್ಲಿ ಮೂಡಿದ್ದು ವಿಶಿಷ್ಟವಾಗಿರುತ್ತವೆ. ಆಧುನಿಕತೆಯಲ್ಲಿ ಈ ಎಲ್ಲವೂ ನಶಿಸಿ ಹೋಗಿರುವುದನ್ನು ನೋಡಬಹುದು ಹಾಗೂ ಜಾನಪದ ಸಾಹಿತ್ಯದಲ್ಲಿ ಕೈಗಾರಿಕೆಗಳಲ್ಲಿ ಕೆಲವು ಪ್ರೀತಿಯ ಮರಗಳ ಸುಂದರವಾದ ಆಕಾರಗಳನ್ನು, ಜಾನಪದ ಕಲೆಗಳನ್ನು ಸೃಷ್ಟಿಸಿರುವುದನ್ನು ಕೈಗಾರಿಕೆಗಳಲ್ಲಿ ನೋಡಬಹುದಿತ್ತು. ಆಧುನಿಕ ಕಾಲದಲ್ಲಿ ಈ ಎಲ್ಲವೂ ಕೈಗಾರಿಕೆಗಳು ಸುಂದರವಾದ ರೂಪವನ್ನು ಕಂಡುಕೊಳ್ಳಲು ಹಾಗೂ ಮಾರ್ಡನ್ (ಹೊಸತನ) ರೀತಿಯಲ್ಲಿ ಜನರನ್ನು ಆಕರ್ಷಿಸಲು ಎಂದು ಈ ಜಾನಪದವನ್ನು ತೆಗೆದುಹಾಕಿ ಈ ಪೀಳಿಗೆಯಲ್ಲಿ ಕೆಲವು ಗಾಜಿನ ರೂಪದ ಮಾರ್ಡನ್ ರೀತಿಯಲ್ಲಿ ಅಳವಡಿಸಿಕೊಂಡು ಜಾನಪದವನ್ನು ಹಿಂದಕ್ಕೆ ಇಟ್ಟಿದ್ದಾರೆ. ಆದ್ದರಿಂದ ಯಾವುದೇ ಬದಲಾವಣೆ ಮಾಡದೆ ಜಾನಪದವನ್ನು ಬೆಳೆಸಬೇಕು. ನಮ್ಮ ಮುಂದಿನ ಪೀಳಿಗೆಗೆ ಜಾನಪದವನ್ನು ಕಟ್ಟಿಕೊಡಲು ನಮಗೆ ತುಂಬಾ ಜವಾಬ್ದಾರಿಯ ಕೆಲಸವಾಗಿರುತ್ತದೆ. ಇದು ಕೈಗಾರಿಕೆಯಲ್ಲಿ ಜಾನಪದವು ಆಧುನಿಕತೆಯಲ್ಲಿ ಕಂಡಿರುವಂತಹ ಒಂದು ಬದಲಾವಣೆಯಾಗಿದೆ.

ಎರಡನೇಯದ್ದು ವಾಹನ ಜಾನಪದದಲ್ಲಿ ಬದಲಾಗಿರುವ ಆಧುನಿಕತೆಯನ್ನು ತಿಳಿದುಕೊಳ್ಳೋಣ. ವಾಹನಗಳನ್ನು ಹಿಂದಿನ ಪೀಳಿಗೆಯಲ್ಲಿ ನೋಡುವುದಾದರೆ ಒಂದು ವಾಹನದಲ್ಲಿ ದೈವಗಳ ಚಿತ್ರ ಹಾಗೂ ಜಾನಪದದ ಕೆಲವು ದೃಶ್ಯಗಳು ಆ ವಾಹನಗಳ ಮೇಲೆ ಚಿತ್ರಿಸಿರುವುದನ್ನು ನೋಡಬಹುದು. ಹಾಗೂ ಜಾನಪದದ ಕೆಲವು ಹಾಡುಗಳು, ಲಾವಣಿಗಳು ಇತ್ಯಾದಿಗಳ ವಾಕ್ಯವನ್ನು ವಾಹನಗಳ ಮೇಲೆ ಬರೆದಿರುವುದನ್ನು ನೋಡಬಹುದಿತ್ತು. ಆದರೆ ಆಧುನಿಕತೆಯಲ್ಲಿ ಸಂಚರಿಸುವ ವಾಹನಗಳು – ಲಾರಿ, ಟ್ಯಾಕ್ಸಿ, ಆಟೋ, ಬಸ್ ಇತ್ಯಾದಿಗಳು ಜಾನಪದ ಕಲೆಗಳನ್ನು ನೋಡುವುದು ತುಂಬಾ ಕಡಿಮೆ ಪ್ರಮಾಣದಲ್ಲಿದೆ. ಆಧುನಿಕತೆಯಲ್ಲಿ ಜಾನಪದವನ್ನು ಹೊರತುಪಡಿಸಿ ಬದಲಾವಣೆಗೆ ಬಂದಿರುವಂತಹ ಆಧುನಿಕತೆಯನ್ನು, ಕೆಲವು ಸಿನಿಮಾ ದೊಡ್ಡ ದೊಡ್ಡ ವ್ಯಕ್ತಿಗಳ ಹೆಸರು, ರಾಜಕೀಯ ವ್ಯಕ್ತಿಗಳ ಹೆಸರು, ಚಲನಚಿತ್ರ ಕಲಾವಿದರ ಹೆಸರು, ಅವರ ಚಿತ್ರಣ ಹಾಗೂ ಇತ್ತೀಚಿಗೆ ಮಾರ್ಡನ್ ಬರುವಂತಹ ಕೆಲವು ಚಿತ್ರಣಗಳು ಹಾಗೂ ವಾಕ್ಯಗಳನ್ನು ಬಳಸುತ್ತಿರುವುದನ್ನು ವಾಹನಗಳ ಮೇಲೆ ನೋಡಬಹುದು. ಆದ್ದರಿಂದ ಜಾನಪದ ಒಂದು ಚಿತ್ರಣವನ್ನು ನೋಡಿದರೆ ಎಲ್ಲರ ಮೈಯಲ್ಲೂ ಒಂದು ಸುಂದರವಾದ ಅನುಭವವನ್ನು ಕಾಣಬಹುದು. ಆದರೆ ಆಧುನಿಕತೆಯಲ್ಲಿ ಕೆಲವು ಕೆಟ್ಟ ವಿಚಾರಗಳನ್ನು ಕೂಡ ನಾವು ವಾಹನಗಳ ಮೇಲೆ ನೋಡಬಹುದು. ಈ ಆಧುನಿಕತೆಯಿಂದ ಜಾನಪದ ಮೇಲೆ ತುಂಬಾ ಕೆಟ್ಟ

ಪರಿಣಾಮವನ್ನು ಬೀರಿದೆ. ಯಾವುದೇ ಒಂದು ಜಾನಪದದ ಕಲೆಯನ್ನು ನೋಡಿದ ತಕ್ಷಣ ಜನರು ಗುರುತಿಸುತ್ತಾರೆ. ಆದರೆ ಆಧುನಿಕತೆಯಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ಮಾರ್ಡನ್ (ಹೊಸತನ) ರೀತಿಯ ಕೆಲವು ಚಿತ್ರಣಗಳನ್ನು ಈ ವಾಹನ ಸಂಚಾರಕರು ಬಳಸುತ್ತಿರುವುದರಿಂದ ಜಾನಪದಕ್ಕೆ ಒಂದು ಕೆಟ್ಟ ಪರಿಣಾಮವನ್ನು ಕಾಣಬಹುದಾಗಿದೆ. ಜಾನಪದ ಕಲೆಯನ್ನು ನಾವುಗಳು ಆಧುನಿಕತೆಯಲ್ಲಿ ವಾಹನಗಳ ಮೇಲೆ ಜಾನಪದ ಚಿತ್ರಣಗಳನ್ನು ಬಳಸಬೇಕು ಹಾಗೂ ಆಧುನಿಕತೆಯಲ್ಲಿ ಭಾಷೆಯನ್ನು ನೋಡಿದರೆ ಕೆಲವು ಭಾಷೆಗಳಿಂದ ಜಾನಪದ ಸಾಹಿತ್ಯವನ್ನು ಮರೆಮಾಚುವಂತಾಗಿದೆ. ಇಂಗ್ಲಿಷ್, ಹಿಂದಿ, ಕನ್ನಡ, ತೆಲುಗು ಮುಂತಾದ ಭಾಷೆಗಳಿಂದ ಜಾನಪದ ಸಾಹಿತ್ಯಕ್ಕೆ ಪರಿಣಾಮ ಬೀರಿದೆ. ಈ ಭಾಷೆಗಳನ್ನು ಕೆಲವು ಡ್ರೈವರ್‌ಗಳು ಬಳಸಿಕೊಂಡು ವಾಹನಗಳ ಮೇಲೆ ಬಳಸಿ ಅದನ್ನು ಚಿತ್ರಿಸುತ್ತಾರೆ. ಅದರಿಂದ ವಾಹನಗಳ ಮೇಲೆ ಡ್ರೈವರ್‌ಗಳು ಜಾನಪದವನ್ನು ಹೆಚ್ಚಾಗಿ ಬಳಸಿದರೆ, ಜಾನಪದ ಸಾಹಿತ್ಯದಲ್ಲಿ ಕೆಲವು ಕಥೆಗಳ ಸಾಲು ಹಾಗೂ ಹಾಡುಗಳ ಸಾಲು ಅವುಗಳನ್ನು ಬಳಸಿದರೆ ಅವುಗಳನ್ನು ಓದಲು ಸಹೃದಯನಿಗೆ ಒಂದು ಖುಷಿಯನ್ನು ತರುತ್ತದೆ. ಆದ್ದರಿಂದ ಆಧುನಿಕತೆಯಲ್ಲಿ ಭಾಷೆವು ಬದಲಾಗುತ್ತಿರುವುದರಿಂದ ಅದನ್ನು ಕಡಿಮೆ ಮಾಡಿ ಜಾನಪದವನ್ನು ಬಳಸಬೇಕು. ವಾಹನಗಳ ಮೇಲೆ ಚಿತ್ರಿಸಿರುವ ಕೆಲವು ಜಾನಪದ ಚಿತ್ರಣಗಳನ್ನು ನೋಡಿ ಅಪಘಾತಗಳು ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತದೆ. ಆ ಚಿತ್ರಣದಿಂದ ಮುಂದೆ ಇರುವಂತಹ ವಾಹನಗಳ ಸಂಚಾರವು ತಿಳಿಯುತ್ತದೆ. ವಾಹನದ ಚಲನವಲನವು ನಾವು ನೋಡಬಹುದು. ಆದ್ದರಿಂದ ಆಧುನಿಕತೆಯನ್ನು ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಮಾಡಿ ಜಾನಪದವನ್ನು ಬಳಸಬೇಕು. ಆಧುನಿಕತೆ ಬಂದಿದ್ದರೂ ಕೂಡ ನಮ್ಮ ಜಾನಪದವನ್ನು ಮರೆಯುವುದಿಲ್ಲ. ವಾಹನಗಳನ್ನು ಖರೀದಿಸಿದ ಕೂಡಲೇ ಒಂದು ಜಾನಪದ ರೀತಿಯಲ್ಲಿ ಅವರು ಅದನ್ನು ಪೂಜಿಸಿ ತರುತ್ತಾರೆ, ಇದು ಜಾನಪದಕ್ಕೆ ಇರುವಂತಹ ದೊಡ್ಡ ಒಂದು ಶಕ್ತಿಯಾಗಿದೆ. ಆದ್ದರಿಂದ ಆಧುನಿಕತೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಜಾನಪದವು ಕಡಿಮೆಯಾಗುತ್ತಾ ಬರುತ್ತಿದೆ. ಆದ್ದರಿಂದ ಜಾನಪದವು ಆಧುನಿಕತೆಯಲ್ಲಿ ವಾಹನಗಳ ಮೇಲೆ ಆಗಿರುವಂತಹ ಬದಲಾವಣೆಯಾಗಿದೆ.

ಮೂರನೆಯದ್ದು ಕಾಲೇಜು ಜಾನಪದ ಆಧುನಿಕತೆಯಲ್ಲಿ ಯಾವ ರೀತಿ ಬದಲಾವಣೆ ಆಗಿದೆ ಎಂದು ತಿಳಿದುಕೊಳ್ಳೋಣ. ಕಾಲೇಜು ಜಾನಪದದಲ್ಲಿ ಯಾವುದೇ ಜಾತಿಭೇದವಿಲ್ಲದೆ ಎಲ್ಲರೂ ಒಂದೇ ಎನ್ನುವ ಮನೋಭಾವವನ್ನು ಈ ಒಂದು ಸ್ಥಳದಲ್ಲಿ ನಾವು ಕಾಣಬಹುದು. ಕಾಲೇಜುಗಳಲ್ಲಿ ಜಾನಪದವು ಹೇಗೆ ಇರುತ್ತದೆ ಎಂದರೆ, ಅಲ್ಲಿ ಬರುವಂತಹ ಮಾಸ್ಟರ್‌ಗಳು, ಪ್ರೊಫೆಸರ್‌ಗಳು ಅವರ ವೇಷಭೂಷಣಗಳು ಹಾಗೂ ಅವರ ನಡುವೆ ಇರುವಂತಹ ವಿವಿಧ ಹಾಡು, ಕಥೆಗಳು

ಒಂದು ಜಾನಪದ ರೀತಿಯಲ್ಲಿ ಇರುತ್ತಿತ್ತು. ಹಿಂದಿನ ಕಾಲದಲ್ಲಿ ಶಿಕ್ಷಕರ ಮತ್ತು ಉಪನ್ಯಾಸಕರ ವೇಷಭೂಷಣ, ನಡವಳಿಕೆ ಹೀಗೆ ವಿವಿಧ ರೀತಿಯಲ್ಲಿ ಆಧುನಿಕತೆಗಳಿಗೆ ತಕ್ಕಂತೆ ಬದಲಾವಣೆಗೊಂಡಿದೆ. ಅವರ ಒಂದು ನಡವಳಿಕೆಯಿಂದ ವಿದ್ಯಾರ್ಥಿಗಳು ಕೂಡ ಆಧುನಿಕತೆಯ ಪ್ರಭಾವದಿಂದ ಕೆಟ್ಟ ಪರಿಣಾಮವನ್ನು ಬೀರಿದೆ. ಜಾನಪದದಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿರುವಂತಹ ದುಃಖ ಹಾಗೂ ನಾವೆಲ್ಲರೂ ಒಂದೇ ಎನ್ನುವ ಮನೋಭಾವ ಅವರಲ್ಲಿ ಕೂಡಿರುತ್ತದೆ ಹಾಗೂ ಎಲ್ಲರನ್ನೂ ಒಂದುಗೂಡಿಸಿ ಕೆಲವು ಜಾನಪದಗಳು ಹಾಗೂ ಜಾನಪದ ಕಲೆಗಳನ್ನು ಕಾಲೇಜುಗಳಲ್ಲಿ ಪ್ರಸ್ತುತಪಡಿಸುತ್ತಿದ್ದರು. ಅದರಿಂದ ಜಾನಪದದ ಕಲೆಗಳು, ವಿಶಿಷ್ಟ ಹಾಡುಗಳು, ಲಾವಣಿಗಳು ಇತ್ಯಾದಿಗಳು ಆ ಮಕ್ಕಳಿಗೆ ರೂಢಿಯಲ್ಲಿ ಬರುತ್ತಿದ್ದವು. ಅವರ ಒಂದು ಜಾನಪದ ಕಲೆ ಹಾಗೂ ಲಾವಣಿ, ಒಗಟು ಇತ್ಯಾದಿಗಳನ್ನು ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಯಲ್ಲಿ ಹಾಗೂ ಸ್ನೇಹಿತರಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು ಹೇಳುವಂತೆ ಲಾವಣಿ ಹಾಡುಗಳು ಎಷ್ಟೋ ಜನರ ಮನಸ್ಸು ಹಗುರವಾಗಿ ಮಾಡಲು ಕಾರಣವಾಗುತ್ತವೆ. ಸಾಹಿತ್ಯವನ್ನು ಒಂದು ಉತ್ತಮ ರೀತಿಯಲ್ಲಿ ಬೆಳೆಸಿಕೊಂಡು ಹೋಗುತ್ತಿದ್ದರು. ಆಧುನಿಕತೆಯಲ್ಲಿ ಜಾನಪದವನ್ನು ವ್ಯಕ್ತಿಗಳಿಂದ, ವಿದ್ಯಾರ್ಥಿಗಳು ಕೂಡ ಅದೇ ರೀತಿಯಲ್ಲಿ ಅವರು ಮರೆಮಾಚುತಿದ್ದಾರೆ. ಕೆಲವು ಮಾಸ್ಟರ್‌ಗಳು, ಪ್ರೊಫೆಸರ್‌ಗಳು ಅವರ ಉನ್ನತ ಡ್ರೆಸ್ ಕೋಡ್ ಹಾಗು ಅವರ ನಡವಳಿಕೆಗಳಿಂದ ವಿದ್ಯಾರ್ಥಿಗಳು ಕೂಡ ಕಾಲೇಜಿನ ಮೇಲೆ ಪರಿಣಾಮವು ಬೀರುತ್ತಿದೆ. ಯಾರು ನಿನ್ನ ಕಥೆಯಲ್ಲಿ ಯಾವುದೇ ಒಂದು ಲಾವಣಿ ಪದ, ಗೀಗೀ ಪದ, ಒಗಟುಗಳು ಇತ್ಯಾದಿಗಳನ್ನು ಬಳಸಲು ಕಾಲೇಜುಗಳು ಕಡಿಮೆ ಪ್ರಮಾಣದಲ್ಲಿ ಮಾಡಿದೆ. ಆದ್ದರಿಂದ ಆಧುನಿಕತೆಯು ಒಂದು ಕೆಟ್ಟ ಪರಿಣಾಮ ಬೀರುತ್ತಿದೆ ಜಾನಪದ ಮೇಲೆ. ಜಾನಪದವು ಕಾಲೇಜುಗಳಲ್ಲಿ ಯಾವುದೇ ಒಂದು ಫಂಕ್ಷನ್ (ಕಾರ್ಯಕ್ರಮ) ಇರುವಾಗ ವಿದ್ಯಾರ್ಥಿಗಳು ಜಾನಪದದ ಹಾಡುಗಳು ಹಾಗೂ ಲಾವಣಿಗಳು, ಡ್ರೆಸ್ ಕೋಡ್‌ಗಳು, ಅವರ ಒಂದು ಜಾನಪದ ಸಂಭ್ರಮವು ಕಾಲೇಜು ತುಂಬಾ ಮನೆ ಮಾಡಿರುವುದು, ಅವರ ಸಂತೋಷ, ಉತ್ಸಾಹ ಅವರನ್ನು ಒಂದು ದೊಡ್ಡ ರೂಪದಲ್ಲಿ ಅವರಿಗೆ ಖುಷಿಯನ್ನು ಕೊಡುತ್ತಿತ್ತು. ಜಾನಪದವು ಕಾಲೇಜುಗಳಲ್ಲಿ ಗುಂಪು ಗುಂಪುಗಳನ್ನು ಮಾಡಿ ಅವರ ಒಂದು ಕಲೆಗಳನ್ನು ಜಾನಪದ ರೀತಿಯಲ್ಲಿ ಪ್ರಸ್ತಾಪ ಪಡಿಸುತ್ತಿದ್ದರು. ಅವರು ಮಾಡುವಂತಹ ಕೆಲವು ಜಾನಪದ ಕಲೆಯಿಂದ ಅವರು ಒಂದು ಉತ್ತಮ ರೀತಿಯಲ್ಲಿ ಬೆಳೆಯುತ್ತಿದ್ದರು. ಆದರೆ ಆಧುನಿಕತೆಯಿಂದ ಜಾನಪದ ಕಲೆಗಳು ನಶಿಸಿಹೋಗುವ ಪರಿಸ್ಥಿತಿಯಲ್ಲಿ ಬಂದಿದೆ. ಈ ಆಧುನಿಕತೆಯಲ್ಲಿ ಡಿಜೆ ಹಾಗೂ ಮನಸ್ಸಿಗೆ ತೃಪ್ತಿ ಆಗದ ಕೆಲವು ಸಂಗತಿಗಳು, ಹಾಡುಗಳು ಇವುಗಳನ್ನು ಕಾಲೇಜಿನಲ್ಲಿ ಆಧುನಿಕತೆಯಲ್ಲಿ ಬಳಸಿಕೊಂಡು ಜಾನಪದವನ್ನು ಕಡಿಮೆ ಪ್ರಮಾಣದಲ್ಲಿ ಮಾಡುತ್ತಿದ್ದಾರೆ. ಆಧುನಿಕತೆಯಲ್ಲಿ ಮಾರ್ಡನ್ ಆಗಿ ಬರುವಂತಹ ಎಲ್ಲಾ ವಸ್ತುಗಳನ್ನು ತಂದು ಡೆಮೊ ಇಡುತ್ತಾರೆ. ಆದರೆ

ಜಾನಪದದಲ್ಲಿ ಎಲ್ಲರೂ ಸೇರಿ ಮಾಡಿರುವಂತಹ ಕೆಲವು ಡೆಕೊರೇಶನ್ ಹಾಗೂ ಅವರಿಗೆ ಇಷ್ಟಪಡುವಂತಹ ವಸ್ತುಗಳನ್ನು ತಂದು ಜಾನಪದ ಕಲೆಯಲ್ಲಿ ಸೃಷ್ಟಿ ಮಾಡುತ್ತಿದ್ದರು. ಆದರೆ ಆಧುನಿಕತೆಯಲ್ಲಿ ಯಾವುದೇ ಒಂದು ಕಲೆ ಸೃಷ್ಟಿ ಇರಲಿ ಯಾವುದೇ ಇರಲಿ ಡೆಮೊ ಅನ್ನು ತಂದು ಇಡುತ್ತಾರೆ. ಅವರ ಪರಿಶ್ರಮವಿಲ್ಲದೆ ಈ ಒಂದು ಮಾರ್ಡನ್ ರೀತಿಯಲ್ಲಿ ಇರುತ್ತಾರೆ. ಈ ಆಧುನಿಕತೆಯಲ್ಲಿ ಕೆಲವು ಸಂಗತಿಗಳನ್ನು ನೋಡುವುದಾದರೆ, ಯಕ್ಷಗಾನ ಎಂಬ ಒಂದು ಕಲೆಯು ಜಾನಪದ ಸಾಹಿತ್ಯದಲ್ಲಿ, ಅವರ ವೇಷಭೂಷಣ ಹಾಗೂ ಅವರು ಹಾಡುವಂತಹ ಹಾಡು, ಮಾತನಾಡುವ ಪದಗಳು ಅವುಗಳನ್ನು ಕೇಳಿಸಿಕೊಂಡರೆ ನಮ್ಮ ಮನಸ್ಸಿಗೆ ಒಂದು ಆಳವಾದ ಸಂತೋಷವನ್ನು ತಂದು ಕೊಡುತ್ತಿತ್ತು. ಆದರೆ ಈ ಆಧುನಿಕತೆಯಿಂದ ಅವರ ವೇಷ ಭೂಷಣಗಳು ಕಡಿಮೆಯಾಗಿದೆ. ಅವರ ಒಂದು ಮಾರ್ಡನ್ ರೀತಿಯಲ್ಲಿ ಕೂಡ ಅವರು ಕೆಲವು ಸೌಂಡ್ ಬಾಕ್ಸ್‌ಗಳನ್ನು ಬಳಸಿಕೊಂಡು ಅವರೇ ಮಾತನಾಡದೆ ಹಾಗೂ ಪರಸ್ಪರ ಸಂಭಾಷಣೆ ಮಾಡದೇ ಆ ಒಂದು ಆಧುನಿಕತೆಗೆ ತಲೆಬಾಗಿ ಸಂಭಾಷಣೆ ಮಾಡದೇ ಸೌಂಡ್ ಬಾಕ್ಸ್‌ಗಳಿಗೆ ಅಳವಡಿಸಿ ಅವರು ಕೂಡ ಬದಲಾಗಿದ್ದಾರೆ. ಆದ್ದರಿಂದ ಈ ಒಂದು ಆಧುನಿಕತೆಗೆ ಬದಲಾಗದೆ ಜಾನಪದ ಸಾಹಿತ್ಯವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ನನ್ನ ಒಂದು ಅಭಿಪ್ರಾಯ. ಇವು ಜಾನಪದ ಸಾಹಿತ್ಯ ಮತ್ತು ಆಧುನಿಕತೆಗೆ ಆಗಿರುವಂತಹ ಕೆಲವು ಬದಲಾವಣೆಗಳ ಅಂಶವಾಗಿವೆ. ಆದ್ದರಿಂದ ನಾವುಗಳು ಆಧುನಿಕತೆಯನ್ನು ಸ್ವಲ್ಪ ಕಡಿಮೆ ಮಾಡಿ ಜನಪದ ಸಾಹಿತ್ಯವನ್ನು ಬಳಸಬೇಕು. ಜಾನಪದ ಸಾಹಿತ್ಯಗಳಿಂದ ನಮಗೆ ತುಂಬಾ ಒಂದು ದೊಡ್ಡ ಜ್ಞಾನಮಟ್ಟದ ರೀತಿಯಲ್ಲಿ ತೋರಿಸುತ್ತದೆ. ಆಧುನಿಕತೆಯಿಂದ ಕೆಲವು ಪರಿಣಾಮಗಳು ಹಾಗೂ ನಮ್ಮ ಒಂದು ಮನಸ್ಸಿಗೆ ತೊಂದರೆ ಉಂಟುಮಾಡುತ್ತದೆ. ಆದ್ದರಿಂದ ನಾವುಗಳು ಜಾನಪದ ಸಾಹಿತ್ಯವನ್ನು ಮುಂದುವರಿಸಿಕೊಂಡು ಹೋಗಬೇಕು, ಅದರಿಂದ ನಮಗೆ ತುಂಬಾ ಪ್ರಮಾಣದ ಸಂತೋಷ ಹಾಗೂ ನೆಮ್ಮದಿಯನ್ನು ಕೊಡುತ್ತದೆ. ಈ ಆಧುನಿಕತೆಯಿಂದ ಮನಸ್ಸುಗಳು ದೂರವಾಗುತ್ತವೆ ಹಾಗೂ ಅವುಗಳಿಂದ ಕಿರಿ ಕಿರಿ ಎನಿಸುತ್ತದೆ. ಆಧುನಿಕತೆಯನ್ನು ಮುಂದುವರಿಸಿಕೊಂಡು ಹೋಗಲಿ ಆದರೆ ಜಾನಪದವನ್ನು ಬದಲಾವಣೆ ಮಾಡಬಾರದು. ಆಧುನಿಕತೆಯನ್ನು ಸ್ವಲ್ಪ ಪ್ರಮಾಣದಲ್ಲಿ ಅಳವಡಿಸಿಕೊಂಡು ಜಾನಪದವನ್ನು ಮುಂದುವರಿಸಿಕೊಂಡು ಹೋಗೋಣ.

**ಕೊನೆ ಟಿಪ್ಪಣಿಗಳು:**

1. ಚಕ್ಕೆರೆ ಶಿವಶಂಕರ್, (2010), ಜಾನಪದ ಪ್ರವೇಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ. 92
2. ಅದೇ, ಪು.ಸಂ. 97

**ಪರಾಮರ್ಶನ ಗ್ರಂಥಗಳು:**


1. ಚಕ್ಕೆರೆ ಶಿವಶಂಕರ್, (2010), ಜಾನಪದ ಪ್ರವೇಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಗಂಗಾನಾಯಕ್ ಕೆ.ಎನ್. (ಪ್ರ. ಸಂ), (2011), ಜಾನಪದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಗಾಯತ್ರೀ ನಾವಡ, (2018), ಜನಪದ ಸಾಹಿತ್ಯ ಸಂಚಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
4. ಬಸವರಾಜು ತೋಟಹಳ್ಳಿ, (2008), ಜನಪದ ಸಂಸ್ಕೃತಿಯ ನೆಲೆಗಳು, ದೇವಿ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.